ಸ್ಥಾಪಿಸುವುದಕ್ಕೆ ಸರ್ಕಾರದ ನೀತಿಯಾಗಿದೆ. ಆದುದರಿಂದ ಹೊಳೆನರಸೀಪುರದಲ್ಲಿ ಒಂದು ಅಗ್ನಿ ಶಾಮಕ ಠಾಣೆಯನ್ನು ಮುಂಬರುವ ವರ್ಷಗಳಲ್ಲಿ ಸಂಪನ್ಮೂಲ, ಭೂಮಿ ಇತ್ಯಾದಿಗಳನ್ನು ಆಧರಿಸಿ ಸ್ಥಾಪಿಸುವ ಸಾಧ್ಯತೆ ಇದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೇ, ಹೊಳೇನರಸೀಪುರ ಪಟ್ಟಣದಲ್ಲಿ ಅಗ್ನಿಶಾಮಕ ದಳವನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ಎಂದು ಕೇಳಿದರೆ ಇಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಪ್ರತಿ ತಾಲ್ಲೂಕಿನಲ್ಲೂ ಕೂಡ ಹಂತ ಹಂತವಾಗಿ ಅಗ್ನಿಶಾಮಕ ಕೇಂದ್ರಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದ ನೀತಿಯಿದೆ ಎಂದು ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಹೇಳುವುದಕ್ಕೆ ಯಾರು ಸಂಬಂಧಪಟ್ಟ ಮಂತ್ರಿಗಳು ಎಂದು ನಿರ್ಧಾರವಾದರೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಚೌದರಿ ಅವರ ಪರವಾಗಿ ರಮಾನಾಥರೈ ಅವರು ಉತ್ತರವನ್ನು ಹೇಳುತ್ತೇನೆಂದರು. ತಾವು ಅದನ್ನು ಕೇಳಿಸಿಕೊಳ್ಳಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಮಂತ್ರಿಗಳು ಒಂದು ಸಾರಿಯಾದರೂ ಸದನಕ್ಕೆ ಬಂದು ಉತ್ತರ ಹೇಳಲಿ, ಸದನ ನಡೆಯುವ ಕಾಲದಲ್ಲಿ ಒಂದು ಸಲ ಅವಕಾಶ ಸಿಕ್ಕಿದಾಗಲೂ ಸಹ ಮಂತ್ರಿಗಳು ಬರುವುದಿಲ್ಲವೆಂದರೆ ಇದು ವ್ಯವಸ್ಥೆ ದೃಷ್ಟಿಯಿಂದ ಸರಿ ಎಂದು ನನಗೆ ಕಾಣುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ನಮ್ಮಲ್ಲಿ ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭ ಮಾಡಬೇಕು ಎಂದು ಕಳೆದ 3 ವರ್ಷಗಳಿಂದ ಸರ್ಕಾರದಲ್ಲಿ ಪ್ರಸ್ತಾವನೆ ನಡೆಯುತ್ತಿದೆ. ಇದಕ್ಕೆ ಹೋಮ್ ಗಾರ್ಡ್ಸ್ ಸೂಪರಿನ್‌ಟೆಂಡೆಂಟ್ ಕೂಡ ಶಿಫಾರಸ್ಸು ಮಾಡಿದ್ದಾರೆ. ಮತ್ತು ಪುರಸಭೆಯವರು ಕೂಡ ರೆಸಲ್ಯೂಷನ್ ಮಾಡಿ ಲ್ಯಾಂಡ್‌ನ್ನು ಫ್ರೀ ಕೊಡುವುದಕ್ಕೆ ಒಪ್ಪಿದ್ದಾರೆ. ಮತ್ತು ಎಪಿಎಂಸಿ ಯಾರ್ಡ್‌ನವರೂ ಕೂಡ ಕನ್‌ಸೆಂಟ್ ಕೊಟ್ಟಿದ್ದಾರೆ. ಇಷ್ಟೆಲ್ಲಾ ಇದ್ದರೂ ಕೂಡ ಪ್ರಸ್ತಾವನೆ ನಮ್ಮ ಮುಂದೆ ಇಲ್ಲ ಎಂದು ಹೇಳಿದ್ದಾರೆ. ಇನ್ನು ಎರಡನೆಯದಾಗಿ ಹಂತ ಹಂತವಾಗಿ ಮಾಡುವಂತಹ ನೀತಿ ಸರ್ಕಾರದ್ದಾಗಿರುವಾಗ ಈ ವರ್ಷದಿಂದಲೇ ಅದನ್ನು ಆರಂಭ ಮಾಡುವುದಕ್ಕೆ ಸರ್ಕಾರ ಒಂದು ಸ್ಪಷ್ಟ ಭರವಸೆ ಕೊಡಬೇಕು ಎಂದು ನಾನು ಮಂತ್ರಿಯವರನ್ನು ಕೇಳುತ್ತೇನೆ.

ಶ್ರೀ ರಮಾನಾಥ ರೈ (ಗೃಹ ಮಂತ್ರಿಗಳು) (ಬಂದೀಖಾನೆ ರಾಜ್ಯ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಈಗಾಗಲೇ ಹಾಸನ ಜಿಲ್ಲೆಯಲ್ಲಿ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ಈ ಮೂರು ಕಡೆ ಅಗ್ನಿಶಾಮಕ ಠಾಣೆ ಸ್ಥಾಪನೆಯಾಗಿ ಅಲ್ಲಿ ಕೆಲಸ ನಿರ್ವಹಿಸುತ್ತಿವೆ. ಹೊಳೇನರಸೀಪುರದಲ್ಲಿ ಅಗ್ನಿಶಾಮಕ ಠಾಣೆಯಾಗಬೇಕು ಎಂದು ಸನ್ಮಾನ್ಯ ಸದಸ್ಯರಾದಂತಹ ನಮ್ಮ ಪುಟ್ಟಸ್ವಾಮಿಗೌಡರು ಕೇಳುತ್ತಲೇ ಇದ್ದಾರೆ. ಹಂತ ಹಂತವಾಗಿ ನಾವು ಎಲ್ಲ ತಾಲ್ಲೂಕುಗಳಲ್ಲಿ ಕೂಡ ಇಂತಹ ಅಗ್ನಿಶಾಮಕ ಠಾಣೆಗಳನ್ನು ಮಾಡಬೇಕು ಎಂದು ಆ ಬಗ್ಗೆ ತೀರ್ಮಾನ ತೆಗೆದುಕೊಂಡ ಪ್ರಕಾರ, ಮುಂದಿನ ಹಂತದಲ್ಲಿ ಹೊಳೆನರಸೀಪುರಕ್ಕೆ ಅಗ್ನಿಶಾಮಕ ಠಾಣೆಯನ್ನು ಕೊಡುವುದಕ್ಕೆ ಪರೀಶೀಲನೆ ಮಾಡುತ್ತೇವೆ.

ಸೋಮವಾರಪೇಟೆ ತಾಲ್ಲೂಕು ಕುಶಾಲನಗರದಲ್ಲಿ ಡಿ.ವೈ.ಎಸ್.ಪಿ. ಕಛೇರಿ ಕಟ್ಟಡ ನಿರ್ಮಾಣ

32 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸೋಮವಾರಪೇಟೆ ತಾಲ್ಲೂಕು ಕುಶಾಲ ನಗರದಲ್ಲಿರುವ ಡಿ.ವೈ.ಎಸ್.ಪಿ. ಕಚೇರಿಗೆ ನೂತನ ಕಟ್ಟಡ ಮಂಜೂರು ಮಾಡಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆಯೇ; ಹಾಗಿದ್ದಲ್ಲಿ ಈ ಕಟ್ಟಡ ಮಂಜೂರಾಗಿದ್ದರೆ ಯಾವಾಗ ಪ್ರಾರಂಭಿಸಲಾಗುವುದು; ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮವೇನು ?*

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಹೌದು.

ಆ) ಸದರಿ ಕಾಮಗಾರಿಯನ್ನು 1993-94ನೇ ಸಾಲಿನ ಆದ್ಯತಾ ಪಟ್ಟಿಯಲ್ಲಿ ಸೇರಿಸಿ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕರ್ನಾಟಕ ರಾಜ್ಯ ಪೋಲೀಸ್ ವಸತಿ ನಿಗಮಕ್ಕೆ ಆದೇಶಿಸಿದೆ. ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಸದರಿ ಕಾಮಗಾರಿಯನ್ನು ತ್ವರಿತವಾಗಿ ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಎ.ಎಂ. ಬೆಳ್ಳಿಯಪ್ಪ : ಮಾನ್ಯ ಅಧ್ಯಕ್ಷರೆ, ಸೋಮವಾರ ಪೇಟೆ ತಾಲ್ಲೂಕಿನ ಕುಶಾಲ ನಗರದಲ್ಲಿ ಒಂದು ಡೆಪ್ಯುಟಿ ಸೂಪರಿನ್‌ಟೆಂಡೆಂಟ್ ಆಫ್ ಪೋಲೀಸ್ ಕಚೇರಿ ಮಂಜೂರಾಗಿ ಸುಮಾರು 12 ವರ್ಷಗಳೇ ಕಳೆದವು. ಈ 12-13 ವರ್ಷಗಳಿಂದ ಅಲ್ಲಿ ಆಫೀಸ್ ಇಲ್ಲ. ನಾಡ ಕಚೇರಿಯ ಎರಡು ಕೊಠಡಿಯಲ್ಲಿ ಈ ಕಚೇರಿಯನ್ನು ನಡೆಸುತ್ತಿದ್ದಾರೆ. ಆ ನಾಡ ಕಛೇರಿ ಕೂಡ 2 ರೂಮು ಇರುವಂಥಾದ್ದು. ಇದರಿಂದ ಅಲ್ಲಿನ ಜನರಿಗೆ, ಗುಮಾಸ್ತರಿಗೆ ಮತ್ತು ಅಧಿಕಾರಿಗಳಿಗೆ ಬಹಳ ತೊಂದರೆಯಾಗಿದೆ. ಆದುದರಿಂದ ಇದರ ಬಗ್ಗೆ ನಾನು ಪ್ರಸ್ತಾವನೆ ಕಳುಹಿಸಿದ್ದೆ. ಪ್ರತ್ಯೇಕವಾಗಿ ಡಿ.ವೈ.ಎಸ್.ಪಿ ಕಚೇರಿಯನ್ನು ಕಟ್ಟಬೇಕು ಎಂದು ಹೇಳಿ ನಾನು 3 ವರ್ಷಗಳಿಂದ ಪ್ರಸ್ತಾವನೆ ಕೊಡುತ್ತಾ ಬಂದಿದ್ದೇನೆ. ಇದಕ್ಕೆ ಮಾನ್ಯ ಮಂತ್ರಿಯವರು ಉತ್ತರ ಕೊಡುತ್ತಿದ್ದಾರೆ, ಸದರಿ ಕಾಮಗಾರಿಯನ್ನು 1993-94ನೇ ಸಾಲಿನ ಆದ್ಯತಾ ಪಟ್ಟಿಯಲ್ಲಿ ಸೇರಿಸಿ, ಕೈಗೆತ್ತಿಕೊಳ್ಳಲು ಕರ್ನಾಟಕ ರಾಜ್ಯದ ಪೋಲೀಸ್ ವಸತಿ ನಿಗಮಕ್ಕೆ ಆದೇಶಿಸಿದೆ. ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಸದರಿ ಕಾಮಗಾರಿಯನ್ನು ತ್ವರಿತವಾಗಿ ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಬಜೆಟ್‌ನಲ್ಲಿ ಇದಕ್ಕೆ ಎಷ್ಟು ಹಣ ಕೊಟ್ಟಿದ್ದಾರೆ? ಈ ವರ್ಷ ಈ ಕೆಲಸ ಶುರು ಮಾಡಬೇಕಾದರೆ ಎಷ್ಟು ಹಣ ಲಭ್ಯ ಇದೆ ಎಂದು ದಯವಿಟ್ಟು ಸನ್ಮಾನ್ಯ ಗೃಹಮಂತ್ರಿಗಳು ಹೇಳಬೇಕು. ಮತ್ತು ಈ ಕಾಮಗಾರಿಯನ್ನು ತೆಗೆದುಕೊಂಡು ಎಷ್ಟು ತಿಂಗಳುಗಳಲ್ಲಿ ಮುಗಿಸುತ್ತಾರೆ ಎಂಬುದನ್ನು ಹೇಳಬೇಕು. ಇನ್ನೊಂದು ವಿಷಯವೇನೆಂದರೆ ಈ ಪ್ರಸ್ತಾವನೆಯನ್ನು 3 ವರ್ಷಗಳಿಂದ ಕೊಡುತ್ತಾ ಬಂದಿದ್ದಾರೂ ಕೂಡ ಇದು 94ರ ಮಧ್ಯಭಾಗವಾಗಿದ್ದರೂ ಕೂಡ ಇನ್ನೂ ಕಾಮಗಾರಿಯನ್ನು ತೆಗೆದುಕೊಳ್ಳಲಿಲ್ಲ. ಇದನ್ನು ಯಾವಾಗ ತೆಗೆದುಕೊಳ್ಳುತ್ತೀರಿ ಎಂದು ತಿಳಿಸಬೇಕು.

ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೆ, ಡಿ.ವೈ.ಎಸ್.ಪಿ. ಕಛೇರಿಯನ್ನು ಕಟ್ಟಬೇಕು ಎಂದು ಸರ್ಕಾರ ಆದೇಶ 7-3-94ರಲ್ಲಿ ನೀಡಲಾಗಿದೆ. ಈ ಕಾಮಗಾರಿ ಕೆಲಸಕ್ಕೆ ಆಯವ್ಯಯದಲ್ಲಿ 13.11 ಕೋಟಿ ರೂಪಾಯಿಗಳನ್ನು ಅನುದಾನ ನೀಡಿದ್ದೇವೆ. ಇದನ್ನು ಪೋಲೀಸ್ ವಸತಿ ನಿಗಮವೇ ಕೈಗೊಳ್ಳಬೇಕು ಎಂದು ಆದೇಶ ನೀಡಿದೆ.

11.30 ಎಎಂ

ಶ್ರೀ ಎ.ಎಂ. ಬೆಳ್ಳಿಯಪ್ಪ : ದಯವಿಟ್ಟು ಯಾವಾಗ ಇದನ್ನು ತೆಗೆದುಕೊಳ್ಳುತ್ತೀರಿ ಎಂದು ಆಶ್ವಾಸನೆ ಕೊಡಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಚೌಡರೆಡ್ಡಿ : ಅದನ್ನು ನಾನು ಅತಿ ಬೇಗ ತೆಗೆದುಕೊಳ್ಳುವುದಕ್ಕೆ ಆದೇಶ ನೀಡುತ್ತೇನೆ.